# 99ರ ಸಂಘ



ಸುನಯನ ವಾಲ್ಟರ್ಸ್

ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿದ್ದನು. ತನ್ನ ವೈಭವಪೂರ್ಣ ರಾಜಗದ್ದುಗೆ ಸರ್ವಸಂಪತ್ತು, ಉನ್ನತ ಮಟ್ಟದ ಜೀವನಕ್ರಮಗಳಿದ್ದರೂ ಅವನಿಗೆ ಸಂಪೂರ್ಣ ಸಂತೋಷ, ತೃಪ್ತಿಗಳ ಕೊರತೆ ಇತ್ತು.

ಒಂದು ದಿನ ಎಂದಿನಂತೆ ದೇಶ ಸಂಚಾರದಲ್ಲಿದ್ದಾಗ ಒಬ್ಬ ದಿನಕೂಲಿಯವನು ಕೆಲಸಮಾಡುತ್ತಾ ಸಂತೋಷದಿಂದ ಹಾಡುತ್ತಿದ್ದುದು ಅವನ ಕಣ್ಣಿಗೆ ಬಿತ್ತು ಅರಸನಿಗೆ ಕುತೂಹಲ, ಆಶ್ಚರ್ಯ ಒಟ್ಟಿಗೇ ಉಂಟಾಯಿತು. ರಾಜ್ಯವನ್ನೇ ಆಳುವ ತನಗೆ ಅಸಂತೋಷ, ಮಾನಸಿಕ ಕಳವಳಗಳಿರುವಾಗ ಈ ಯಃಕಶ್ಚಿತ್ ಆಳಿಗೆ ಇಷ್ಟೊಂದು ಸಂತೋಷ ಹೇಗೆ? ಈ ಯೋಚನೆ ರಾಜನಲ್ಲಿ ಕುತೂಹಲ ಮೂಡಿಸಿತ್ತು. ಆತನು ನೇರವಾಗಿ ಆ ಆಳಿನ ಬಳಿಗೆ ಹೋಗಿ ಪ್ರಶ್ನಿಸಿದ – "ನೀನು ಇಷ್ಟೊಂದು ಸಂತೋಷದಿಂದಿರಲು ಕಾರಣವೇನು?" ಆಳು ಉತ್ತರಿಸಿದ – "ಮಹಾಪ್ರಭು, ನಾನೊಬ್ಬ ಸಾಮಾನ್ಯ ಕೆಲಸಗಾರ. ನನಗೆ ಮತ್ತು ನನ್ನ ಕುಟುಂಬಕ್ಕೆ ಬೇಕಾದುದೆಲ್ಲ ನನ್ನ ಬಳಿ ಇದೆ. ಆಶ್ರಯಕ್ಕಾಗಿ ಒಂದು ಮನೆ, ಉಡಲು ಬಟ್ಟೆ, ಉಣ್ಣಲು ಹೊಟ್ಟೆ ತುಂಬುವಷ್ಟು ಬಿಸಿ ಊಟ. ಇವೆಲ್ಲವೂ ನನ್ನ ದುಡಿತದ ಫಲವಾಗಿ ನನಗೆ ದೊರೆತಿರುವುದರಿಂದ ನನಗೆ ಅಸಂತೋಷ ಪಡಲು ಕಾರಣವೇ ಇಲ್ಲ"

ಆದರೆ ಈ ಉತ್ತರದಿಂದ ರಾಜನಿಗೆ ತೃಪ್ತಿಯಾಗಲಿಲ್ಲ. ನೇರವಾಗಿ ಅರಮನೆಗೆ ಹಿಂತಿರುಗಿದ ಆತ ತನ್ನ ಆಪ್ತ ಸಲಹೆಗಾರನನ್ನು ಕರೆಯಕಳುಹಿಸಿದ. ಆ ಆಳಿನ ಕಥೆಯನ್ನು ರಾಜನ ಕಳವಳವನ್ನೂ ಶಾಂತಚಿತ್ತದಿಂದ ಕೇಳಿ ಯೋಚಿಸಿದ ಸಲಹೆಗಾರನೆಂದ – "ಮಹಾಪ್ರಭುಗಳೇ, ಆ ಮನುಷ್ಯನು 99ರ ಸಂಘದ ಸದಸ್ಯನಾಗಿಲ್ಲವೆಂದು ನನಗನಿಸುತ್ತದೆ".

"99ರ ಸಂಘ? – ನಾನು ಆ ಸಂಘದ ಹೆಸರೇ ಕೇಳಿಲ್ಲವಲ್ಲ! ಅದರ ಕುರಿತಾಗಿ ನನಗೆ ಪೂರ್ಣ ವಿವರ ತಿಳಿಸು" – ರಾಜನು ಅವಸರಿಸಿದ.

"ಮಹಾರಾಜರೇ, 99ರ ಸಂಘದ ವಿವರ ಮತ್ತು ಮಹತ್ವವನ್ನು ಅರಿಯಲು ಒಂದು ಚೀಲವನ್ನು 99 ಚಿನ್ನದ ನಾಣ್ಯಗಳಿಂದ ತುಂಬಿಸಿ ಆ ಆಳಿನ ಮನೆಯ ಬಾಗಿಲಲ್ಲಿ ಇರಿಸಿ ಕಾದು ನೋಡಿರಿ" – ಸಲಹೆಗಾರನೆಂದ ಅಂತೆಯೇ ಮಾಡಲಾಯಿತು.

ತನ್ನ ಮನೆಯ ಬಾಗಿಲಲ್ಲಿ ಒಂದು ತುಂಬಿದ ಚೀಲವನ್ನು ಕಂಡ ಆ ಆಳು ಕುತೂಹಲದಿಂದ ಒಳಗೆ ಒಯ್ದು ತೆರೆದು ನೋಡಿದ. ಥಳಥಳಿಸುವ ಚಿನ್ನದ ನಾಣ್ಯಗಳು! ಒಂದು ದೊಡ್ಡ ಸಂತಸದ ಉದ್ಗಾರ ಅವನ ಬಾಯಿಯಿಂದ ಹೊರಬಿತ್ತು. ಎಲ್ಲಾ ಕೆಲಸ ಮರೆತು ಅಲ್ಲೇ ಕುಳಿತು ನಾಣ್ಯಗಳನ್ನು ಲೆಕ್ಕಿಸಲಾರಂಭಿಸಿದ. 99 ನಾಣ್ಯಗಳು! ಒಂದು ಬಾರಿ.... ಎರಡು ಬಾರಿ..... ಮೂರು ಬಾರಿ.... ಹೀಗೆ ಹಲವಾರು ಬಾರಿ ಲೆಕ್ಕಿಸಿದ. ತೊಂಭತ್ತೊಂಭತ್ತು ನಾಣ್ಯಗಳು!? ಹಾಗಾದರೆ ನೂರನೇ ನಾಣ್ಯ ಏನಾಯಿತು?

ಆ ಮನುಷ್ಯ ಹುಡುಕಲಾರಂಭಿಸಿದ. ತೊಂಭತ್ತೊಂಭತ್ತು ನಾಣ್ಯಗಳನ್ನು ಯಾರೂ ಇಡಲಾರರು. ಹಾಗಾದರೆ ನೂರನೆಯ ನಾಣ್ಯವೆಲ್ಲಿ? ಹುಡುಕಿ ಹುಡುಕಿ ದಣಿದ ಆ ಮನುಷ್ಯನಿಗೆ ಜೀವನದಲ್ಲಿ ಮೊದಲನೆಯ ಬಾರಿ ಅಸಂತೃಪ್ತಿಯ ಅನುಭವವಾಯಿತು. ನೆಮ್ಮದಿ ದೂರವಾಯಿತು. ನಿದ್ರೆ ದೂರವಾಯಿತು. ಅವನೊಂದು ದೃಢ ನಿರ್ಧಾರ ಮಾಡಿದ – "ನೂರನೆಯ ಚಿನ್ನದ ನಾಣ್ಯವನ್ನು ಸಂಪಾದಿಸಿ ಚೀಲ ಭರ್ತಿಮಾಡಬೇಕು."

"ಹೆಚ್ಚು ದುಡಿಯಬೇಕು. ಹೆಚ್ಚು ಸಂಪಾದಿಸಬೇಕು. ಇನ್ನೊಂದು ಚಿನ್ನದ ನಾಣ್ಯಪಡೆದು ಚೀಲ ಭರ್ತಿಮಾಡಬೇಕು" – ಇದೇ ಅವನ ಧ್ಯೇಯವಾಯಿತು. ಆ ದಿನದಿಂದ ಅವನ ಜೀವನ ಬದಲಾಯಿತು. ಹಗಲೂ ರಾತ್ರಿ ವಿಶ್ರಾಂತಿ ಇಲ್ಲದೆ ದುಡಿಯಲಾರಂಭಿಸಿದ. ಚಡಪಡಿಕೆ, ಸಿಟ್ಟು, ಸಿಡುಕು ಹೆಚ್ಚಾಯಿತು. ಆ ನೂರನೆಯ ನಾಣ್ಯವನ್ನು ಸಂಪಾದಿಸಲು ಕುಟುಂಬದ ಸದಸ್ಯರಾರೂ ತನಗೆ ಸಹಾಯಮಾಡುತ್ತಿಲ್ಲವೆಂದು ನೊಂದುಕೊಂಡು ಆಪಾದಿಸಿದ. ಅವನು ಕೆಲಸ ಮಾಡುವಾಗ ಹಾಡುವುದು ನಿಂತೇ ಹೋಯಿತು!

ಇದೆಲ್ಲವನ್ನೂ ಪರೀಕ್ಷಿಸುತ್ತಲೇ ಇದ್ದ ರಾಜ ಅಚ್ಚರಿಗೊಂಡು ತನ್ನ ಸಲಹೆಗಾರನನ್ನು ಕರೆಸಿದ. "ಮಹಾರಾಜರೇ, ಈ ಮನುಷ್ಯನೀಗ 99ರ ಸಂಘದ ಸದಸ್ಯತ್ವ ಪಡೆದಿದ್ದಾನೆ". – ಸಲಹೆಗಾರನೆಂದ – "ಈ ಸಂಘದಲ್ಲಿರುವವರು ತಮ್ಮ ಜೀವನಕ್ಕೆ ಬೇಕಾದಷ್ಟು ಸಂಪಾದಿಸುತ್ತಿದ್ದರೂ ನೆಮ್ಮದಿ ತೃಪ್ತಿಗಳಿಂದ ದೂರವಿರುತ್ತಾರೆ. ಅವರು ಸದಾಕಾಲವೂ ಆ ಹೆಚ್ಚಿನ ಒಂದಕ್ಕಾಗಿ ಕಾತುರರಾಗಿರುತ್ತಾರೆ. ಅತೃಪ್ತಿ, ಅಸಂತೋಷ, ಅಶಾಂತಿ ಎಲ್ಲವೂ ಅವರನ್ನು ಕಾಡುತ್ತವೆ. ಅವರು ತಮ್ಮಲ್ಲೇ ಅಂದುಕೊಳ್ಳುತ್ತಾರೆ. ಆ ಒಂದನ್ನು ನಾನು ಸಂಪಾದಿಸಿದ ಮೇಲೆ ತೃಪ್ತಿಯಿಂದಿರುತ್ತೇನೆ."

ದೇವರು ತನ್ನ ಸೃಷ್ಟಿಯಲ್ಲಿ ವೈವಿಧ್ಯವನ್ನಿಟ್ಟಿದ್ದಾನೆ ಮತ್ತು ನಮ್ಮ ಸಂತೊಷಕ್ಕೆ ಇದೇ ಕಾರಣ. ಪ್ರತಿಯೊಬ್ಬರಿಗೂ ವಿಭಿನ್ನ ರೀತಿಯ ವರಗಳನ್ನು ದೇವರು ನೀಡಿರುವುದರಿಂದ ನಮಗೆ ಈ ಲೋಕದಲ್ಲಿ ವಿಭಿನ್ನ ಕೆಲಸಗಳು. ಹೀಗಿರುವುದರಿಂದಲೇ ನಮ್ಮ ಜೀವನದ ರೀತಿಯೂ ವಿಭಿನ್ನವಾಗಿ ಇರುತ್ತದೆ. ಪೌಲನ ಮಾತಿನಂತೆ – *"ಒಂದೇ ದೇಹದಲ್ಲಿ ಬಹಳ ಅಂಗಗಳಂತೆ, ನಾವು ಕ್ರಿಸ್ತನಲ್ಲಿ ಒಟ್ಟಾಗಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ."* (ರೋಮಾ. 12:4-8). ಹಾಗಾಗಿ ಬೇರೆಯದರೊಂದಿಗೆ ತುಲನೆ ಮಾಡುವುದನ್ನು ಬಿಟ್ಟು ಪರರ ಸಂತೋಷದಲ್ಲಿ ಸಂತೋಷ ಪಡೆದರೆ, ಭಾಗಿಗಳಾದರೆ ಈ "ಒಂದು ದೇಹ" ಆರೋಗ್ಯ ಪೂರ್ಣವಾಗಿರುವುದಲ್ಲವೆ?

ನಮಗೆ ಏನು ಕೊಡಲ್ಪಟ್ಟಿದೆಯೋ ಅದರಲ್ಲೇ ಸಂಪೂರ್ಣ ತೃಪ್ತಿಯ ಜೀವನ ನಡೆಸುತ್ತಿರುವಾಗ ಸ್ವಲ್ಪ ಹೆಚ್ಚಿನದನ್ನು ಕಂಡ ಕೂಡಲೇ ಇನ್ನೂ ಹೆಚ್ಚಿನದಕ್ಕಾಗಿ ತವಕಪಡುವುದು ಒಂದು ಸಾಮಾನ್ಯ ಬಲಹೀನತೆ. ಇದರಿಂದ ಎಷ್ಟೋ ಬಾರಿ ನಮಗೆ ಅತೃಪ್ತಿ, ಅಸಂತೋಷ, ನೋವು ಎಲ್ಲವೂ ಕಾಡುತ್ತವೆ. ನಮ್ಮ ಸುತ್ತಲಿರುವವರನ್ನು ನಾವು ಕಾಡಿಸಲಾರಂಭಿಸುತ್ತೇವೆ. ನಮ್ಮ ಬೆಳೆಯುತ್ತಲೇ ಇರುವ ಆಸೆ, ಆಕಾಂಕ್ಷೆಗಳಿಗಾಗಿ ನಮ್ಮ ಸಂತೋಷಕ್ಕೆ ಕಾರಣರಾಗಿ ನಮ್ಮೊಂದಿಗಿರುವರನ್ನು ನೋಯಿಸದಂತೆ ಎಚ್ಚರವಿರಲಿ! ಏಕೆಂದರೆ ಇದೇ ಈ 99ರ ಸಂಘದ ವಿಶೇಷತೆ!!! ■


**ನಿಮ್ಮ ಚಂದಾಹಣ, ದೇಣಿಗೆ, ಕಾಣಿಕೆ, ಕೊಡುಗೆ ಇವುಗಳನ್ನು ಚೆಕ್, ಡಿ.ಡಿ. ಅಥವಾ ಎಮ್.ಓ. ಮೂಲಕ ಕಳಿಸಬಹುದು.**
ನಿಮ್ಮ ಸಮೀಪದ Axis Bank ನಲ್ಲಿ
S.B. A/c No 181010100055596 ಅಥವಾ
**Syndicate Bank S.B. A/c No.**
01542200041449ನಾಗಲಿ
**ಫ್ರಾಂಕ್ಲಿನ್ ಜಯರಾಜ್ ಹೆಸರಿಗೆ ಜಮಾ ಮಾಡಬಹುದು ಮತ್ತು ನಮಗೆ ಒಂದು ಕಾಲ್ ಮಾಡಿ ತಿಳಿಸಿ.**